ಮಾರಣಾಂತಿಕ ಕಾಯಿಲೆಯಿಂದ ನರಳುತ್ತಿರುವ ಕನ್ನಡ ವಿಮರ್ಶೆಯಿಂದ ಪ್ರಾಮಾಣಿಕ–ಅಪ್ಪಟ ಲೇಖಕರು ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ? ಈ ಕೊರತೆಯನ್ನು ತುಂಬಿದ ಅನೇಕ ಸಹೃದಯ ಗೆಳೆಯರೂ ಇದ್ದಾರೆ. ಅಂಥವರಲ್ಲಿ ಡಿ.ಆರ್. ನಾಗರಾಜ್ ಅವರು ನನ್ನ ಕಥೆಗಳ ಕುರಿತು ತೋರಿದ ಉತ್ಸಾಹ, ಕಳಕಳಿ, ವ್ಯಕ್ತಪಡಿಸಿದ ಅಭಿಪ್ರಾಯ ಅಮೂಲ್ಯವೆಂದು ನಾನು ಭಾವಿಸಿದ್ದೇನೆ. ಕೆಲವು ಗೆಳೆಯರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳು ನನ್ನ ಕಥೆಗಳ ಕುರಿತು ನಾನೇ ಯೋಚಿಸುವಂತೆ ಮಾಡಿವೆ.

★★★

ಕಾಲ ಕಳೆದಂತೆ, ಈ ಕಥೆ ಬರೆಯದಿದ್ದರೂ ನಡೆಯುತ್ತಿತ್ತು, ಇಲ್ಲಿ ಭಾವುಕತೆ ಹೆಚ್ಚಾಯಿತು. ವಿವರ ಕಡಿಮೆ ಮಾಡಿದ್ದರೆ ಚೆನ್ನಿತ್ತು, ಒಂದು ಪಾತ್ರದ ಕುರಿತು ತೆಗೆದುಕೊಂಡ ನಿಲುವು ಅಷ್ಟೊಂದು ಸಮರ್ಪಕವಾಗಿರಲಿಲ್ಲ, ಎಂದು ಅನ್ನಿಸುವುದುಂಟು. ಅದರಲ್ಲೂ, ಸಂಯಮ ಸಂವೇದನೆ ಕಳೆದುಕೊಂಡಂತಿರುವ ಈಗಿನ ಧಾವಂತದ ಕ್ಷಿಪ್ರಯುಗದಲ್ಲಿ ನನ್ನ ಕಥೆಗಳು ತುಸು ದೀರ್ಘವೆನ್ನಿಸಬಹುದು. ಜನಪ್ರಿಯ ಸಂಸ್ಕೃತಿ ಹುಟ್ಟುಹಾಕುವ ಅಭಿರುಚಿಯ ಮೇಲುಗೈಯಿಂದಾಗಿ ಕೆಲವು ಕಥೆಗಳು ತುಂಬ ಗಂಭೀರವೆನ್ನಿಸಬಹುದು, ಎಂದು ಅನ್ನಿಸಿದೆ. ಆದರೆ, ಅದು ಲೇಖಕನ ಸಮಸ್ಯೆಯಲ್ಲ, ಅದನ್ನು ಎದುರಿಸಬೇಕಿರುವುದು ಓದುಗ.

**ಕಥನ ಪರಂಪರೆಯಲ್ಲಿ ನನ್ನ ಕಥೆಗಳ ಸ್ಥಾನವೇನು? ಎನ್ನುವ ದೊಡ್ಡ ಪ್ರಶ್ನೆಯನ್ನು ಕೇಳಿಕೊಳ್ಳಲಾರೆ. ಒಂದು ಕಥೆ ಬರೆದಾದ ಮೇಲೆ ಉಂಟಾಗುವ ಖಾಲಿತನ, ಅಸ್ವಸ್ಥತೆ, ಒಂಟಿತನಗಳು ಮತ್ತೊಂದು ಕಥೆಯನ್ನು ಆವಾಹಿಸಿಕೊಳ್ಳುವವರೆಗೂ ಬೆನ್ನಟ್ಟುತ್ತವೆ.**

ಸ್ಥಳೀಯತೆ ಮತ್ತು ಪ್ರಾದೇಶಿಕತೆಗಳ ಅರ್ಥ ವಿಸ್ತಾರ ಬೇರೆ ಬೇರೆ. ದುರ್ದೈವವೆಂದರೆ ಕನ್ನಡದಲ್ಲಿ ಅವೆರಡನ್ನೂ ಒಂದೇ ಎಂಬಂತೆ ನೋಡಲಾಗುತ್ತದೆ. ಸ್ಥಳೀಯತೆ ಒಂದು ಬರಹಕ್ಕೆ ಭಾಷಾ ನಿಖರತೆ, ವಸ್ತು ಖಚಿತತೆ ಮತ್ತು ಪಾತ್ರ ವಿವರಗಳ ಒಳಗಿನ ಸೂಕ್ಷ್ಮತೆ, ಸೊಬಗು, ಒಳಾವರಣವನ್ನು ಒದಗಿಸುತ್ತದೆ. ಪ್ರಾದೇಶಿಕತೆಯು ಬರಹದ ಹೊರಗಿನ ಒಟ್ಟು ಚೌಕಟ್ಟನ್ನು ಸೃಷ್ಟಿಸುತ್ತದೆ. ಉತ್ತರ ಕನ್ನಡದ ಕುಮಟೆ ತಾಲ್ಲೂಕಿನ ಮಿರ್ಜಾನ್ ಸುತ್ತಮುತ್ತ ನಡೆಯಬಹುದಾದ ಕಥೆಯನ್ನು ಬಳ್ಳಾರಿ ಜಿಲ್ಲೆಯ ಸೊಂಡೂರಿನ ಸುತ್ತಮುತ್ತಲಿನ ಭಾಷೆ ಮತ್ತು ಪಾತ್ರಗಳಲ್ಲಿ ಕಟ್ಟಿಕೊಡಲಾಗುವುದಿಲ್ಲ. ಎರಡೂ ಪ್ರದೇಶಗಳಲ್ಲಿ ನಾನು ಪಡೆದ ದಶಕಗಳ ಕಾಲದ ಅನುಭವದಿಂದ ಮತ್ತು ಎರಡೂ ಸ್ಥಳೀಯತೆಯನ್ನು ಹಿಡಿದಿಡುವ ಕಥೆಗಳನ್ನು ಬರೆದಿರುವುದರಿಂದ ಈ ಮಾತು ಹೇಳುತ್ತಿದ್ದೇನೆ.

ಹೊಸ ತಲೆಮಾರಿನ ಲೇಖಕರು ತಮ್ಮ ವಿಶಿಷ್ಟ ಅನುಭವ, ದೃಷ್ಟಿಕೋನವನ್ನು ಕಂಡುಕೊಳ್ಳುವ ಬದಲು ಸುಲಭವಾಗಿ ಪ್ರಚಾರ, ಪ್ರಸಿದ್ಧಿ ನೀಡುವ ಸಿದ್ಧಮಾದರಿ, ಏಕರೂಪದ ಕಥಾನಕಗಳಿಗೆ ಅಂಟಿಕೊಂಡಿರುವುದರಿಂದ ಸಮಕಾಲೀನ ಕಥೆಗಳಲ್ಲಿ ಹೊಸ ಅಭಿವ್ಯಕ್ತಿ, ಕಲಾತ್ಮಕತೆ